ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 5, March-April, 2024, Pp. 31-40.
©*IIMRD*, Mysuru
IIMRD JOURNALS
www.iimrd.com

# ವಿಜಯನಗರ ಕಾಲದಲ್ಲಿ ಆಚರಣೆಯಲ್ಲಿದ್ದ ಸತಿ ಪದ್ಧತಿ (ವಿದೇಶಿ ಪ್ರವಾಸಿ ವರದಿಗಳನ್ನು ಅನುಲಕ್ಷಿಸಿ)

**ಮಂಜುಳ**
ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ. ವಿದ್ಯಾರಣ್ಯ

**ಸಾರಾಂಶ: (Abstract)**

*ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತದಲ್ಲಿ ಆಳ್ವಿಕೆ ಮಾಡಿದಂತಹ ರಾಜಮನೆತನಗಳಲ್ಲಿ ಅತ್ಯಂತ ಶ್ರೀಮಂತವಾದ ಸಾಮ್ರಾಜ್ಯವಾಗಿತ್ತು. ಈ ಸಾಮ್ರಾಜ್ಯವು ಕ್ರಿ.ಶ.1336ರಲ್ಲಿ ಸ್ಥಾಪನೆಗೊಂಡು ನಾಲ್ಕು ಸಂತತಿಗಳಾಗಿ ಆಳ್ವಿಕೆ ಮಾಡಿತು. ಇಲ್ಲಿ ಅನೇಕ ಪ್ರಸಿದ್ಧ ಅರಸರು ಆಳ್ವಿಕೆ ನಡೆಸಿ ಅನೇಕ ಕ್ಷೇತ್ರಗಳಿಗೆ ಕೊಡುಗೆಗಳನ್ನು ನೀಡಿದ್ದಾರೆ. ಈ ಸಾಮ್ರಾಜ್ಯವು ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಹಿತ್ಯ ಹಾಗೂ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಅತ್ಯಂತ ಶ್ರೀಮಂತಿಕೆಯಿಂದ ಕೂಡಿತ್ತು. ಆನೆಗೊಂದಿ, ಹಂಪಿ, ಪೆನುಗೊಂಡ ಹಾಗೂ ಚಂದ್ರಗಿರಿ ಇವರ ರಾಜಧಾನಿಗಳಾಗಿದ್ದವು. ಇಂತಹ ಮಹಾ ಸಾಮ್ರಾಜ್ಯಕ್ಕೆ ದೇಶ–ವಿದೇಶದಿಂದ ಅನೇಕ ರಾಯಭಾರಿಗಳು, ಅಧಿಕಾರಿಗಳು ಹಾಗೂ ಪ್ರವಾಸಿಗರು ಭೇಟಿ ನೀಡುತ್ತಿದ್ದರು. ಅಂತಹ ವೈಭವಯುತವಾಗಿರುವ ಸಾಮ್ರಾಜ್ಯದಲ್ಲಿ ಸಾಕಷ್ಟು ರೀತಿಯ ಅನಿಷ್ಟ ಪದ್ಧತಿಗಳು ಇದ್ದವು. ಈ ಸಾಮ್ರಾಜ್ಯದಲ್ಲಿ ಸ್ತ್ರೀಯರಿಗೆ ಗೌರವಯುತವಾದ ಸ್ಥಾನವಿದ್ದರು ಸಹ ಅನೇಕ ರೀತಿಯ ಅನಿಷ್ಟ ಪದ್ಧತಿಗಳಿಗೆ ಬಲಿಯಾಗುತ್ತಿದ್ದರು. ಇಲ್ಲಿ ದೇವದಾಸಿ ಪದ್ಧತಿ, ಗುಲಾಮ ಗಿರಿ, ಬಲಿ ಪದ್ಧತಿ, ವೇಶ್ಯಾವಾಟಿಕೆ ಹಾಗೂ ಸತಿ ಪದ್ಧತಿಗಳು ಆಚರಣೆಯಲ್ಲಿದ್ದವು. ಈ ಪದ್ಧತಿಗಳು ವಿಜಯನಗರ ಸಾಮ್ರಾಜ್ಯದಲ್ಲಿ ಇದ್ದವೆಂದು ಹೇಳಲು ನಮಗೆ ಶಾಸನಗಳು, ಸಾಹಿತ್ಯ ಕೃತಿಗಳು ಹಾಗೂ ಪ್ರವಾಸಿ ವರದಿಗಳು ದೊರೆಯುತ್ತವೆ. ಪ್ರಸ್ತುತ ಲೇಖನದಲ್ಲಿ ವಿಜಯನಗರ ಕಾಲದಲ್ಲಿ ಆಚರಣೆಯಲ್ಲಿದ್ದ ಸತಿ ಪದ್ಧತಿಯ ಬಗ್ಗೆ ಬೆಳಕು ಚೆಲ್ಲಲಾಗಿದೆ.*

**ಮುಖ್ಯಪದಗಳು (Keywords):** ಕರ್ನಾಟಕ ಇತಿಹಾಸ, ವಿಜಯನಗರ ಸಾಮ್ರಾಜ್ಯ, ಸತಿ ಪದ್ಧತಿ, ವಿದೇಶಿ ಪ್ರವಾಸಿಗರು, ಪ್ರವಾಸ ಕಥನ.

## ಪೀಠಿಕೆ

ವಿಜಯನಗರ ಸಾಮ್ರಾಜ್ಯವು ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಹಿತ್ಯ ಹಾಗೂ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಅತ್ಯಂತ ಶ್ರೀಮಂತಿಕೆಯಿಂದ ಕೂಡಿತ್ತು. ಈ ಸಾಮ್ರಾಜ್ಯದಲ್ಲಿ ಸ್ತ್ರೀಯರಿಗೆ ಗೌರವಯುತವಾದ ಸ್ಥಾನವಿದ್ದರು ಸಹ ಅನೇಕ ರೀತಿಯ ಅನಿಷ್ಟ ಪದ್ಧತಿಗಳಿಗೆ ಬಲಿಯಾಗುತ್ತಿದ್ದರು. ಅಂತಹ ಅನಿಷ್ಟ ಪದ್ಧತಿಗಳಲ್ಲಿ ಸತಿ ಪದ್ಧತಿಯೂ ಒಂದಾಗಿದೆ. ಈ ಪದ್ಧತಿಯ ಬಗ್ಗೆ ವಿಜಯನಗರ ಸಾಮ್ರಾಜ್ಯಕ್ಕೆ ಬೇಟಿ

*Please cite this article as:* *ಮಂಜುಳ.* (2024). ವಿಜಯನಗರ ಕಾಲದಲ್ಲಿ ಆಚರಣೆಯಲ್ಲಿದ್ದ ಸತಿ ಪದ್ಧತಿ (ವಿದೇಶಿ ಪ್ರವಾಸಿ ವರದಿಗಳನ್ನು ಅನುಲಕ್ಷಿಸಿ). ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(5). ಪು.ಸಂ.* 31–40

ನೀಡಿದ್ದ ವಿದೇಶಿ ಪ್ರವಾಸಿಗರಾದ ನಿಕೊಲೊ–ದಿ–ಕೊಂತಿ, ದು ಆರ್ತೆ ಬಾರ್ಬೊಸಾ, ಫರ್ನಾಓ ನ್ಯೂನಿಜ್, ಸೀಜರ್ ಫ್ರೆಡೆರಿಕ್ ಹಾಗೂ ಬ್ಯಾರಡಸ್ ಎನ್ನುವವರು ವಿಜಯನಗರ ಕಾಲದಲ್ಲಿದ್ದ ಸತಿ ಪದ್ಧತಿ ಕುರಿತಂತೆ ತಮ್ಮ ವರದಿಗಳಲ್ಲಿ ದಾಖಲಿಸಿದ್ದಾರೆ.

**ಸತಿ ಪದ್ಧತಿಯ ಹಿನ್ನೆಲೆ**

ಸತಿ ಪದ್ಧತಿ ಎಂದರೆ ಪತಿಯ ಮರಣದ ನಂತರ ಪತ್ನಿ ತನ್ನ ಪ್ರಾಣ ತ್ಯಾಗ ಮಾಡುವ ಸ್ತ್ರೀಯನ್ನು ಸತಿ ಅಥವಾ ಮಹಾಸತಿ ಎಂದು ಕರೆಯುತ್ತಾರೆ. ಸತಿ ಪದ್ಧತಿಯಲ್ಲಿ ಎರಡು ವಿಧ. ಒಂದು ಸಹಗಮನ, ಮತ್ತೊಂದು ಅನುಗಮನ. ಪತಿ ಮಡಿದ ನಂತರ ಅವನ ಶವದೊಡನೆ ಚಿತೆ ಏರುವ ಪದ್ಧತಿ ಸಹಗಮನ. ಇದನ್ನು ಸಾಮಾನ್ಯವಾಗಿ ಎಲ್ಲಾ ಕಾಲಕ್ಕೂ, ಎಲ್ಲಾ ಸಂದರ್ಭಗಳಲ್ಲಿ ಅನುಸರಿಸುತ್ತಿದ್ದರು. ಮತ್ತೊಂದು ಪತಿ ಎಲ್ಲಿಯೋ ದೂರದ ಪ್ರದೇಶದಲ್ಲಿ ಮರಣ ಹೊಂದಿದಾಗ ಅವನ ಶವ ಸಿಗದೇ ಹೋಗಲು ಅವನ ಪ್ರಿಯವಾದ ಒಂದು ವಸ್ತುವಿನೊಡನೆ ಚಿತೆಗೆ ಏರುವುದು ಅನುಗಮನ.[1]

ಸತಿ ಪದ್ಧತಿ ಕುರಿತಂತೆ ನಮಗೆ ಪ್ರಾಚೀನ ಕಾಲದಿಂದಲೂ ಉಲ್ಲೇಖಗಳು ದೊರೆಯುತ್ತವೆ. ಆದರೆ ಭಾರತದಲ್ಲಿ ಪ್ರಾರಂಭದಲ್ಲಿದ್ದ ಸತಿ ಪದ್ಧತಿ ಕುರಿತು ನಿಖರವಾದ ಉಲ್ಲೇಖಗಳಿಲ್ಲ. ಈ ಪದ್ಧತಿ ಬೃಹತ್ ಶಿಲಾಯುಗದಲ್ಲಿತ್ತೆಂದು ಆ ಕಾಲದ ಸಮಾಧಿಗಳಿಂದ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆ ಕಾಲದ ಸಮಾಧಿಯಲ್ಲಿ ಗಂಡು–ಹೆಣ್ಣಿನ ಅಸ್ಥಿಪಂಜರಗಳು ದೊರೆತಿರುವ್ಯದರಿಂದ ಈ ರೀತಿಯಾಗಿ ಹೇಳುತ್ತಾರೆ.

ಮಹಾಭಾರತದಲ್ಲಿ ಮಾದ್ರಿಯ ಸಹಗಮನ ಪ್ರಮುಖವಾದದ್ದು. ಪಾಂಡು ರಾಜನೊಡನೆ ತಾನು ಸಹಗಮನ ಹೊಂದುವ ಮೊದಲು ತನ್ನ ಸಮಸ್ತ ಭಾರವನ್ನು ಕುಂತಿಗೆ ನಿರ್ವಹಿಸಿಕೊಟ್ಟು ಅವಳು ಸಹಗಮನ ಕೈಗೊಳ್ಳುತ್ತಾಳೆ.[2] ಶಿವನ ಪತ್ನಿ ದಾಕ್ಷಾಯಿಣಿ ಅಥವಾ ಸತಿದೇವಿ ಪತಿಯ ಪರವಾಗಿ ನಿಂತು ದಕ್ಷಬ್ರಹ್ಮನ ಯಜ್ಞದಲ್ಲಿ ಪ್ರಾಣಾರ್ಪಣೆ ಮಾಡಿದ ಘಟನೆಯೇ ಗಂಡನಿಗಾಗಿ ಹೆಂಡತಿ ಚಿತಾ ಪ್ರವೇಶ ಮಾಡಿದ ಘಟನೆ ಈ ಸತಿ ಪದ್ಧತಿಗೆ ಮೂಲವಾಗಿರಬೇಕು.[3]

ಭಾರತದಲ್ಲಿ ಕ್ರಿ.ಶ. 4ನೇ ಶತಮಾನದಿಂದ ಈ ಪದ್ಧತಿಯು ಹೆಚ್ಚು ಆಚರಣೆಗೆ ಬಂದಿತು. ಪ್ರಾರಂಭದಲ್ಲಿ ಹೆಚ್ಚಾಗಿ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಗಳು ದೊರೆಯುತ್ತವೆ.

ಕರ್ನಾಟಕದಲ್ಲಿ ಸಹಗಮನದ ಅತ್ಯಂತ ಪ್ರಾಚೀನ ಉಲ್ಲೇಖವೆಂದರೆ ಬಹುಶಃ ಕ್ರಿ.ಶ.ಸು. 400ರ ಸೊರಬ ತಾಲೂಕಿನ ಶಾಸನ. ಕದಂಬ ವಂಶದ ರಾಣಿಯೊಬ್ಬಳು ರವಿವರ್ಮನೊಡನೆ(ಈತ ಆಕೆಯ ಗಂಡನಾಗಿರಬೇಕು) ಮುಕ್ತಳಾದಂತೆ ಆ ಶಾಸನವು ತಿಳಿಸುತ್ತದೆ.[4] ಈ ಶಾಸನದ ನಂತರ ಮುಂದೆ 9–10ನೇ ಶತಮಾನದವರೆಗೆ ಸಹಗಮದ ಕುರಿತು ಯಾವುದೇ ಉಲ್ಲೇಖಗಳು ದೊರೆಯುವುದಿಲ್ಲ. ನಂತರ ಕ್ರಿ.ಶ. 908–09ರ ಶಾಸನವೊಂದರಲ್ಲಿ ....ನ ಹೆಗ್ಗಡೆ ತೊಮ್ಮನೆಂಬೊ...(ಆಜಿ)ಯೊಳ್ಕಾದಿ ಸತ್ತೊಡಾತನ ಪೆಂಡತಿ ಬಳಕ್ಕನ ಪ...ಸದೊ ಕಾಯಿಕೋಜ ಎಂದಿದೆ. ಈ ಶಾಸನದಲ್ಲಿ ಸಹಗಮನದ ವಿಷಯವು ಇದ್ದಿರಬಹುದಾದ ಭಾಗವು ತ್ರುಟಿತವಾಗಿದೆ.[5] ಇದು ಹಗರಿಬೊಮ್ಮನಹಳ್ಳಿ ತಾಲೂಕು ಕೋಗಳಿ ಗ್ರಾಮದಲ್ಲಿರುವ ಶಾಸನೋಕ್ತ ವೀರಗಲ್ಲು ಆಗಿದೆ.

ಕರ್ನಾಟಕದಲ್ಲಿ ಸಹಗಮದ ಸ್ಪಷ್ಟ ಐತಿಹಾಸಿಕ ನಿದರ್ಶನ ಕ್ರಿ.ಶ. 972ರ ಶಾಸನವೊಂದರಲ್ಲಿ ದೊರಕುತ್ತದೆ. ಬಿದಿಯಣ್ಣ ಎನ್ನುವವನು ಮಡಿದಾಗ ಅವನ ಹೆಂಡತಿಯಾಗಿದ್ದ ಜಕ್ಕಬ್ಬೆಯು ಪ್ರಾಣವನ್ನು ತ್ಯಜಿಸುತ್ತಾಳೆ. ಅವಳ ತಂಗಿ ಜಾಬೆಯು ಕಲ್ಲನ್ನು ನಿಲ್ಲಿಸುತ್ತಾಳೆ.[6] ನಂತರ 11ನೇ ಶತಮಾನದಿಂದ 13ನೇ ಶತಮಾನದವರೆಗೂ ಸಾಕಷ್ಟು ಶಾಸನಗಳು ಸತಿ ಪದ್ಧತಿ ಕುರಿತು ಉಲ್ಲೇಖಿಸುತ್ತದೆ.

ವಿಜಯನಗರ ಕಾಲಕ್ಕೆ ಬಂದರೆ ಸತಿ ಸಹಗಮದ ಕುರಿತು ಸಾಕಷ್ಟು ಘಟನೆಗಳು ಶಾಸನಗಳಲ್ಲಿ ದೊರೆಯುತ್ತವೆ. ಈ ಕಾಲದಲ್ಲಿ ಒಟ್ಟು 91 ಸತಿಘಟನೆಗಳು ಜರುಗಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ.[7] ಇಂತಹ ಇನ್ನು ಸಾವಿರಾರು ಸತಿ ಘಟನೆಗಳು ನಡೆದಿರಬಹುದು. ಕ್ರಿ.ಶ.1354ರ ಹಿರೇಆವಲಿ ಶಾಸನವು ವಿಜಯನಗರ ಕಾಲದ ಮೊಟ್ಟ ಮೊದಲನೆಯ ಸತಿ ಉಲ್ಲೇಖವುಳ್ಳದ್ದಾಗಿದೆ.[8] ಈ ಶಾಸನವು ಶ್ರೀ ವೀರಹರಿಯಪ್ಪ ವೊಡೆಯರು ರಾಜ್ಯವಾಳುತ್ತಿದ್ದಾಗ, ಆವಲಿ ಗ್ರಾಮದ ಕಾಮಗೌಡನ ಮೊಮ್ಮಗನೂ ಸಿರಿಯಮಗವುಡನ ಮಗನೂ ಆದ ಮಲಗವುಡನು ಸನ್ಯಾಸನ ಮರಣ ಹೊಂದಿದ್ದನೆಂದೂ, ಆಗ ಅವನ ಪತ್ನಿ ಚೆಂನಕ್ಕ ಸಹಗಮ ಮಾಡಿಕೊಂಡಳೆಂದೂ ಹೇಳುತ್ತದೆ. ಇದೇ ಊರಿನಲ್ಲಿ ಕ್ರಿ.ಶ.1376ರಲ್ಲಿಯ ಇನ್ನೊಂದು ಶಾಸನವು ಬೇಚಿಗೌಡನು ಪಂಚ ನಮಸ್ಕಾರದಿಂದ ಮಡಿಯಲಾಗಿ ಆತನ ಕಿರಿಯ ಮದವಳಿಕೆ ಮುದ್ದಿಗೌಂಡಿ ಸಹಗಮನ ಹೊಂದಿದಳೆಂದು ತಿಳಿಸುತ್ತದೆ. ಈ ಕಾಲದಲ್ಲಿ ಬುಕ್ಕರಾಯ ವಿಜಯನಗರವನ್ನು ಆಳುತ್ತಿದ್ದನೆಂದು ಈ ಶಾಸನವು ಉಲ್ಲೇಖಿಸುತ್ತದೆ. ಇದೇ ರೀತಿ ಇನ್ನು ಹಲವಾರು ಶಾಸನಗಳು ವಿಜಯನಗರ ಕಾಲದ ಸತಿ ಘಟನೆಗಳನ್ನು ಉಲ್ಲೇಖಿಸುತ್ತವೆ.

ಸಹಗಮನವನ್ನು ಮಾಡಿ ಮಹಾಸತಿಯಾದವರ ನೆನಪಿಗಾಗಿ ನಿಲ್ಲಿಸಿದ ಸ್ಮಾರಕಗಳೇ ಮಾಸ್ತಿಕಲ್ಲು ಅಥವಾ ಸತಿಕಲ್ಲು. ಸಾಮಾನ್ಯವಾಗಿ ಮಾಸ್ತಿಕಲ್ಲುಗಳೆಂದರೆ ಸತಿಯಾದವಳು ಬಲಗೈಯನ್ನು ಮೇಲಕ್ಕೆ ಎತ್ತಿರುತ್ತಾಳೆ, ಎಡಗೈಯಲ್ಲಿ ನಿಂಬೆಹಣ್ಣು ಹಿಡಿದಿರುತ್ತಾಳೆ. ಕೆಲವು ಮಾಸ್ತಿಕಲ್ಲುಗಳಲ್ಲಿ ಮಾಸ್ತಿ ಜೊತೆ ವೀರನು ಇರುತ್ತಾನೆ. ಕೆಲವು ಮಾಸ್ತಿಕಲ್ಲುಗಳಲ್ಲಿ ಕನ್ನಡಿ ಹಾಗೂ ಕಲಶ ಹಿಡಿದಿರುತ್ತಾಳೆ.

ಸತಿ ಪದ್ಧತಿ ಕುರಿತಂತೆ ಶಾಸನಗಳಷ್ಟೇ ಅಲ್ಲದೆ ಸ್ಮಾರಕ ಶಿಲ್ಪಗಳು, ಜನಪದ ಗೀತೆಗಳು, ಸಾಹಿತ್ಯ ಕೃತಿಗಳು ಹಾಗೂ ಪ್ರವಾಸಿ ವರದಿಗಳು ಮಾಹಿತಿ ನೀಡುತ್ತವೆ. ವಿಜಯನಗರ ಕಾಲದ ಸತಿಪದ್ಧತಿ ಕುರಿತು ಇರುವ ಪ್ರವಾಸಿ ವರದಿಗಳು ಈ ಕೆಳಗಿನಂತಿವೆ.

**ನಿಕೊಲೊ–ದೆ–ಕೊಂತಿ**

ಇವನು ಎರಡನೆ ದೇವರಾಯನ ಆಳ್ವಿಕೆ ಕಾಲದಲ್ಲಿ ಬರುತ್ತಾರೆ. ಇವನು ವೇನೀಸ್ ನಗರದವರು. ಸಿರಿಯಾ ದೇಶದ ಡಮಾಸ್ಕಸ್ ನಗರದಲ್ಲಿ ವರ್ತಕನಾಗಿ ತನ್ನ ವೃತ್ತಿಯನ್ನು ಪ್ರಾರಂಭಿಸುತ್ತಾನೆ. ನಂತರ ಇವನು ಇಂಡಿಯಾ ದೇಶದ ಮಲಬಾರ್ ತೀರ, ವಿಜಯನಗರ, ಪೆನುಗೊಂಡ ಹಾಗೂ ಮಲಯಪುರ ಮುಂತಾದ ಸ್ಥಳಗಳಿಗೆ ಭೇಟಿ ನೀಡುತ್ತಾನೆ. ಇವನು ವಿಜಯನಗರ ಸಾಮ್ರಾಜ್ಯದ ಕುರಿತಂತೆ ಅಲ್ಲಿನ ಹಬ್ಬಗಳು, ಕೋಟೆ ಪ್ರದೇಶ, ಜಾತ್ರೆಗಳು ಹಾಗೂ ಸತಿ ಸಹಗಮನದ ಕುರಿತು ತನ್ನ ವರದಿಯಲ್ಲಿ ನೀಡುತ್ತಾನೆ.

ಇವನು ಸತಿ ಪದ್ಧತಿ ಕುರಿತಂತೆ ಈ ರೀತಿಯಾಗಿ ಹೇಳಿದ್ದಾನೆ. ಇಲ್ಲಿಯ ನಿವಾಸಿಗಳು (ಅಂದರೆ ವಿಜಯನಗರದ ಜನರು) ತಮ್ಮ ಇಚ್ಛೆ ಬಂದಷ್ಟು ಜನ ಹೆಂಡತಿಯರನ್ನು ಮದುವೆಯಾಗುತ್ತಾರೆ. ಗಂಡಸರು ಸತ್ತರೆ ಹೆಂಡತಿಯರೆಲ್ಲ ಚಿತೆಯಲ್ಲಿ ಬಿದ್ದು ಸಾಯುತ್ತಾರೆ.

ಇಲ್ಲಿಯ ರಾಜನು (ಪ್ರೌಢದೇವರಾಯ) ಇಂಡಿಯಾ ದೇಶದ ರಾಜರೆಲ್ಲರಿಗಿಂತ ಬಹಳ ಬಲಾಢ್ಯನಾಗಿದ್ದಾನೆ. ಇವನಿಗೆ 12,000 ಹೆಂಡತಿಯರಿದ್ದಾರೆ. ಇವರಲ್ಲಿ ನಾಲ್ಕು ಸಾವಿರ ಜನ ಅವನು ಹೋದೆಡೆಯಲ್ಲೆಲ್ಲಾ ಕಾಲ್ನಡಿಗೆಯಲ್ಲಿ ಹೋಗುತ್ತಾರೆ. ಇವರದು ಮುಖ್ಯವಾಗಿ ಅಡುಗೆಯ ಕೆಲಸ. ಇವರಿಗಿಂತಲೂ ಹೆಚ್ಚು ರೂಪವತಿಯರಾದ ನಾಲ್ಕು ಸಾವಿರ ಹೆಂಡತಿಯರು ಕುದುರೆಗಳ ಮೇಲೆ ಸವಾರಿ ಮಾಡುತ್ತಾರೆ. ಉಳಿದವರನ್ನು ಪಲ್ಲಕ್ಕಿಗಳ ಮೇಲೆ ಗಂಡಸರು ಹೊತ್ತುಕೊಂಡು ಹೋಗುತ್ತಾರೆ. ಇವರಲ್ಲಿ ಎರಡು ಮೂರು ಸಾವಿರ ಹೆಂಡತಿಯರು ರಾಜನು ಸತ್ತಾಗ ತಮ್ಮ ಆತ್ಮ ಸಂತೋಷದಿಂದ ಚಿತೆಯೊಳಗೆ ಬಿದ್ದು ಪ್ರಾಣತ್ಯಾಗ ಮಾಡುತ್ತೇವೆಂಬ ವಾಗ್ದಾನ ಮಾಡಿ ರಾಜನ ಕೈಹಿಡಿದಿರುತ್ತಾರೆ.[9]

**ದುಆರ್ತೆ ಬಾರ್ಬೋಸಾ**

ಇವನು ಲಿಸ್ಬನ್ ದೇಶದವನಾಗಿದ್ದು, ಕ್ರಿ.ಶ.1500ರಲ್ಲಿ ಭಾರತಕ್ಕೆ ಭೇಟಿ ನೀಡುತ್ತಾನೆ. ಪೋರ್ಚುಗೀಸ್ ಭಾಷೆಯಲ್ಲಿ ಬರೆದಿದ್ದು, ಇವನು ಭೇಟಿ ನೀಡಿದ ಕಾಲದಲ್ಲಿ ಕೃಷ್ಣದೇವರಾಯನು ವಿಜಯನಗರದಲ್ಲಿ ಆಳ್ವಿಕೆ ಮಾಡುತ್ತಿದ್ದನು.

ಇವನು ಸತಿ ಪದ್ಧತಿ ಕುರಿತಂತೆ ಈ ರೀತಿಯಾಗಿ ಹೇಳಿದ್ದಾನೆ. ನರಸಿಂಗ ರಾಜ್ಯ (ಪೋರ್ಚುಗೀಸರು ವಿಜಯನಗರವನ್ನು ನರಸಿಂಗ ರಾಜ್ಯ ಎಂದು ಕರೆದಿದ್ದಾರೆ).

ನರಸಿಂಗ ರಾಜನ ಜೆಂಟೈಲರಲ್ಲಿ ಮೂರು ಪಂಗಡಗಳಿವೆ. ಪ್ರತಿಯೊಂದು ಪಂಗಡವೂ ತನ್ನದೇ ಆದ ರೀತಿನೀತಿ ನಿಯಮಗಳನ್ನು ಪಾಲಿಸುತ್ತದೆ ಮತ್ತು ಬೇರೆ ಪಂಗಡದಿಂದ ಭಿನ್ನವಾಗಿರುತ್ತದೆ.[10]

ಈ ಪಂಗಡಗಳಲ್ಲಿ ಮುಖ್ಯವಾದುದು ರಾಜನ ಹಾಗೂ ಶ್ರೀಮಂತ ಸರದಾರರುಗಳ ಮತ್ತು ಯುದ್ಧ ಮಾಡುವ ಜನರಿಗೆ ಸಂಬಂಧಪಟ್ಟ ಪಂಗಡ. ಇವರು ತಮಗಿಷ್ಟ ಬಂದಷ್ಟು ಹೆಂಗಸರನ್ನು ಮದುವೆಯಾಗಬಹುದು. ಇವರ ಆಸ್ತಿಪಾಸ್ತಿಗೆ ಗಂಡು ಮಕ್ಕಳೇ ಉತ್ತರಾಧಿಕಾರಿಗಳು. ಗಂಡ ಸತ್ತಾಗ ಹೆಂಡತಿ ಗಂಡನೊಡನೆ ಸಹಗಮನ ಮಾಡಲೇಬೇಕು. ಇದನ್ನು ಪತಿಭಕ್ತಿ ಎಂದು ಭಾವಿಸುತ್ತಾರೆ. ಬಡವಳಾದವಳು ತನ್ನ ಆತ್ಮ ಸಂತೋಷದಿಂದ ಸೀದಾ ಹೋಗಿ ಗಂಡನ ಚಿತೆಯಲ್ಲಿ ಬಿದ್ದು ಸಾಯುತ್ತಾಳೆ. ಅನುಕೂಲಸ್ಥಳಾದವಳು ಚಿತೆಗೆ ಬೀಳುವ ಮುನ್ನ ನೆಂಟರಿಷ್ಟರನ್ನೆಲ್ಲಾ ಸೇರಿಸಿ ಉಟೋಪಚಾರ ಮಾಡಿ ಕುದುರೆಯ ಮೇಲೆ ಮೆರವಣಿಗೆ ಹೊರಡುತ್ತಾಳೆ. ಕುದುರೆ ಬೂದು ಬಣ್ಣದ್ದಿರಬೇಕು ಅಥವಾ ಬಿಳಿ ಬಣ್ಣದ್ದಿರಬೇಕು. ಕುದುರೆಯ ಮೇಲೆ ಮೆರವಣಿಗೆ ಹೊರಟು ಗಂಡನ ಚಿತೆ ಇರುವ ಬಳಿಗೆ ಹೋಗುತ್ತಾಳೆ. ಹೊಸದಾಗಿ ದೊಡ್ಡ ಚಿತೆಯನ್ನೇ ಮಾಡುತ್ತಾರೆ. ಸಿದ್ಧವಾದ ಚಿತೆಯ ಬಳಿಗೆ ಹೋಗಿ ಆಕೆ ಪೂರ್ವಾಭಿಮುಖವಾಗಿ ನಿಂತು ಮೂರು ಸಲ ನಮಸ್ಕಾರ ಮಾಡುತ್ತಾಳೆ. ಆ ಮೇಲೆ ತಾನು ತೊಟ್ಟ ಆಭರಣಗಳನ್ನು ತನ್ನ ನೆಂಟರಿಷ್ಟರಿಗೆ ಹಂಚಿ ಬಿಡುತ್ತಾಳೆ. ಕೊನೆಗೆ ಸೊಂಟಕ್ಕೆ ಸುತ್ತಿದ ಬಟ್ಟೆ ಮಾತ್ರ ಉಳಿಯುತ್ತದೆ. ಈ ಸ್ಥಿತಿಯಲ್ಲಿರುವ ಆಕೆ ಗಂಡಸರನ್ನು ಕುರಿತು 'ನೋಡಿ, ಗಂಡನೊಡನೆ ಸಾಯುವ ಹೆಂಗಸಿಗೆ ನೀವೆಷ್ಟು ಕೃತಜ್ಞರಾಗಿರಬೇಕು ಎಂಬುದನ್ನು' ಎಂದು ಹೇಳುತ್ತಾಳೆ, ಹೆಂಗಸರನ್ನು ಕುರಿತು 'ನಿಮ್ಮ ಪತಿ ಭಕ್ತಿ ಎಷ್ಟಿರಬೇಕು ಎಂಬುದನ್ನು ನೆನಪಿಸಿಕೊಳ್ಳಿ ನನ್ನಂತೆ ನೀವು ನಿಮ್ಮ ಪತಿಯರನ್ನು ಅನುಸರಿಸಬೇಕು' ಎನ್ನುತ್ತಾಳೆ.

ಇಷ್ಟು ಹೇಳಿದ ಮೇಲೆ ಆಕೆಯ ಕೈಗೆ ಎಣ್ಣೆಯ ಗಡಿಗೆಯನ್ನು ಕೊಡುತ್ತಾರೆ. ಆಕೆ ಅದನ್ನು ತಲೆಯ ಮೇಲಿಟ್ಟುಕೊಂಡು ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತಾಳೆ. ಚಿತೆಯನ್ನು ಮೂರು ಸಲ ಪ್ರದಕ್ಷಿಣೆ ಮಾಡಿ ಪೂರ್ವಾಭಿಮುಖವಾಗಿ ನಿಂತು ವಂದನೆಗೈಯ್ಯುತ್ತಾಳೆ. ಆ ಮೇಲೆ ಗಡಿಗೆಯ ಎಣ್ಣೆಯನ್ನು ಉರಿಯುವ ಚಿತೆಗೆ ಸುರಿದು, ಗಡಿಗೆಯನ್ನು ಅದರೊಳಗೆ ಎಸೆದು ಚಿತೆಯೊಳಕ್ಕೆ ಧುಮುಕುತ್ತಾಳೆ. ನೀರಿನ ಕೊಳಕ್ಕೆ ಧುಮುಕುವಷ್ಟು ಸಂತೋಷದಿಂದ ಆಕೆ ಉರಿಯುವ ಅಗ್ನಿ ಕುಂಡದಲ್ಲಿ ಧುಮುಕಿ ಬಿಡುತ್ತಾಳೆ. ಸುತ್ತ ನೆರೆದ ನೆಂಟರಿಷ್ಟರು ತಮ್ಮ ಕೈಯ್ಯಲ್ಲಿ ಹಿಡಿದಿರುವ ಎಣ್ಣೆ, ತುಪ್ಪ, ಒಣ ಸೌದೆಗಳನ್ನು ಹಾಕಿಯ ಮೇಲೆ ಹಾಕುತ್ತಾರೆ. ಆ ಅಗಾಧ ಜ್ವಾಲೆಯಲ್ಲಿ ಆಕೆ ಒಂದರಗಳಿಗೆಯಲ್ಲಿ ಸುಟ್ಟು ಭಸ್ಮವಾಗಿ ಬಿಡುತ್ತಾಳೆ. ಆಮೇಲೆ ಬೂದಿಯನ್ನು ಹರಿಯುವ ನದಿಗಳಿಗೆ ಬಿಡುತ್ತಾರೆ.

ಸಹಗಮನ ಮಾಡದ ಹೆಂಗಸರನ್ನು ಬಹಳ ಅಗೌರವದಿಂದ ಕಾಣುತ್ತಾರೆ. ಅವರ ತಲೆಯನ್ನು ಬೋಳಿಸಿ ಮನೆತನಕ್ಕೆ ಅಮಂಗಳವೆಂದು ಹೊರಗೆ ಅಟ್ಟುತ್ತಾರೆ. ಹೀಗೆ ಮನೆಯಿಂದ ಅಟ್ಟಲ್ಪಟ್ಟ ವಿಧವೆಯರು ದಿಕ್ಕಿಲ್ಲದೆ ಅಲೆಯುತ್ತಾರೆ. ಅತಿ ಚಿಕ್ಕ ವಯಸ್ಸಿನ ವಿಧವೆಯರ ಬಗ್ಗೆ ದಯಾ ದಾಕ್ಷಿಣ್ಯ ತೋರಿಸಿದ ಪಕ್ಷದಲ್ಲಿ, ಅವರನ್ನು ದೇವಸ್ಥಾನಗಳಿಗೆ ಕಳುಹಿಸಿ, ಅಲ್ಲಿ ದೇವಸ್ಥಾನಕ್ಕಾಗಿ ಹಣ ಗಳಿಸಲು ದೇವದಾಸಿಯರಾಗಿ ಬಿಡುತ್ತಾರೆ.

ರಾಜನು ಸತ್ತರೆ ಅವನ ಅಂತಪುರದ ನಾನೂರು ಐನೂರು ಸ್ತ್ರೀಯರು ಅವನೊಡನೆ ಚಿತೆಯಲ್ಲಿ ಬೀಳುತ್ತಾರೆ. ಇಷ್ಟು ಜನರ ಅನುಕೂಲಕ್ಕಾಗಿ ಚಿತೆಯ ಗುಂಡಿಯನ್ನೂ ಚಿತಾಗ್ನಿಯನ್ನೂ ಬಹಳ ದೊಡ್ಡದು ಮಾಡಿರುತ್ತಾರೆ. ಶ್ರೀಗಂಧ ಮುಂತಾದ ಮರಗಳನ್ನು ಎಣ್ಣೆ ತುಪ್ಪಗಳನ್ನು ಹೇರಳವಾಗಿ ಶೇಖರಿಸುತ್ತಾರೆ. ಈ ಚಿತೆಯಲ್ಲಿ ಬೀಳುವುದಕ್ಕೆ ನಾಮುಂದು–ತಾಮುಂದು ಎಂದು ನುಗ್ಗುತ್ತಾರೆ. ಅದೊಂದು ಅಪೂರ್ವ ದೃಶ್ಯ! ರಾಜನ ಅನೇಕ ಅನುಚರರೂ ಇದೇ ರೀತಿ ರಾಜ ಸತ್ತಾಗ ಚಿತೆಯಲ್ಲಿ ಬೀಳುತ್ತಾರೆ.

ಮೂರನೆಯ ಪಂಗಡಕ್ಕೆ ಸೇರಿದವರು ಬ್ರಾಹ್ಮಣರಂತೆಯೇ ಇರುವ ಮತ್ತೊಂದು ತರ ಜನ. ಇವರಲ್ಲಿ ವರ್ತಕರಾದವರು ವ್ಯಾಪಾರದ ಸಾಮಾನುಗಳನ್ನೂ ಹಣವನ್ನೂ ಹೇರಿಕೊಂಡು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಯಾವ ತೊಂದರೆಯೂ ಇಲ್ಲದೆ ಹೋಗುತ್ತಾರೆ.

ಇವರು ಏಕಪತ್ನಿ ವ್ರತಸ್ಥರು. ಗಂಡ ಸತ್ತಾಗ ಹೆಂಡತಿ ಗಂಡನ ಶವದೊಡನೆ ಸಮಾಧಿಯಾಗುತ್ತಾಳೆ. ಒಂದಾಳು ಮಟ್ಟಕ್ಕಿಂತ ಹೆಚ್ಚು ಆಳವಾದ ಗುಂಡಿಯನ್ನು ತೋಡಿ, ಅದರೊಳಗೆ ಆಕೆಯನ್ನು ನಿಲ್ಲಿಸಿ, ಸುತ್ತಲೂ ಮಣ್ಣು ನೂಕಿ, ತುಳಿದು ದಮ್ಮಸ್ಸು ಮಾಡಿ, ತಲೆಯ ಮೇಲೆ ದೊಡ್ಡ ಕಲ್ಲು ಹೇರಿ ಮಣ್ಣನ್ನು ಎಳೆಯುತ್ತಾರೆ. ಆಕೆ ನಿಧಾನವಾಗಿ ಸಾಯುತ್ತಾಳೆ. ಇಂಥ ಸಂದರ್ಭಗಳಲ್ಲಿ ಅನೇಕ ಕರ್ಮಗಳನ್ನು ಮಾಡುತ್ತಾರೆ.[11]

**ಫರ್ನಾಓ ನ್ಯೂನಿಜ್**

ಇವನು ಕೃಷ್ಣದೇವರಾಯನ ಆಳ್ವಿಕೆ ಸಂದರ್ಭದಲ್ಲಿ ವಿಜಯನಗರಕ್ಕೆ ಭೇಟಿ ನೀಡುತ್ತಾನೆ. ಇವರು ಸತಿ ಪದ್ಧತಿ ಕುರಿತಂತೆ ಅವನಿಗೆ (ಅಂದರೆ ಕೃಷ್ಣದೇವರಾಯ) 500 ಹೆಂಡತಿಯರು ಮತ್ತು ಅವನಿಗೆ ಬೇಕಾದಷ್ಟು ಕಡಿಮೆ ಅಲ್ಲವೇ ಹೆಚ್ಚು ಇದ್ದು ಅವರೊಂದಿಗೆ ಅವನು ಮಲಗುತ್ತಾನೆ ಮತ್ತು ಇವರೆಲ್ಲ ಅವನ ಮರಣ ಕಾಲಕ್ಕೆ ಅಗ್ನಿ ಪ್ರವೇಶಿಸುತ್ತಾರೆ.

ಈ ಬಿಸ್ನಗ (ವಿಜಯನಗರ) ರಾಜ್ಯವೆಲ್ಲ ವಿಧರ್ಮಿಯಾದುದು. ಗಂಡಸರು ಸತ್ತಾಗ ಹೆಂಡತಿಯರು ಅಗ್ನಿ ಪ್ರವೇಶಿಸಿ ಸಹಗಮನ ಮಾಡುವ ಪದ್ಧತಿಯಿದೆ ಮತ್ತು ಹಾಗೆ ಮಾಡುವುದೆಂದರೆ ಗೌರವವೆಂದು ಭಾವಿಸುತ್ತಾರೆ. ಆದುದರಿಂದ ತಮ್ಮ ಗಂಡಂದಿರು ಸತ್ತಾಗ ತಮ್ಮ ಹಾಗೂ ತಮ್ಮ ಗಂಡಂದಿರ ಸಂಬಂಧಿಕರೊಂದಿಗೆ ಶೋಕಿಸುತ್ತಾರೆ, ಆದರೆ ಅಳತೆ ಮೀರಿ ಶೋಕಿಸುವ ಹೆಂಡತಿಗೆ ತನ್ನ ಗಂಡನನ್ನು ಅರಸಿ ಹೋಗುವ ಇಚ್ಛೆಯಿಲ್ಲವೆಂದು ಅವರು ಭಾವಿಸುತ್ತಾರೆ ಮತ್ತು ಶೋಕ ಮುಗಿದ ಮೇಲೆ ಅಗ್ನಿ ಪ್ರವೇಶಿಸಲು ಮತ್ತು ತಮ್ಮ ಸಂತತಿಗೆ ಅವಮರ್ಯಾದೆ ಮಾಡದಿರಲು ಅವರ ಸಂಬಂಧಿಗಳು ಅವರಿಗೆ ಉಪದೇಶಿಸುತ್ತಾರೆ. ಅದಾದ ನಂತರ, ಅವರು ಸತ್ತವನನ್ನು ಟೊಂಗೆಗಳ ಮತ್ತು ಹೂಗಳಿಂದ ಅಚ್ಛಾದಿತವಾದ ಮಂಟಪವುಳ್ಳ ಹಾಸಿಗೆಯ ಮೇಲೆ ಇಡುತ್ತಾರೆ. ಹೆಂಡತಿಯನ್ನು ಒಂದು ಕೆಲಸಕ್ಕೆ ಬಾರದ ಕುದುರೆ ಹತ್ತಿಸುತ್ತಾರೆ ಮತ್ತು ಅವಳು ಅನೇಕ ಆಭರಣ ತೊಟ್ಟು ಗುಲಾಬಿಗಳಿಂದ ಆಚ್ಛಾದಿತವಾಗಿ ಅವರ ಹಿಂದೆ  ಹೋಗುತ್ತಾಳೆ. ಅವಳು ಒಂದು ಕೈಯಲ್ಲಿ ಕನ್ನಡಿಯನ್ನು ಇನ್ನೊಂದರಲ್ಲಿ ಹೂಗೊಂಚಲನ್ನು ಹಿಡಿದಿರುತ್ತಾಳೆ. ಅವಳು ಮತ್ತು ಅನೇಕ ವಿಧದ ಸಂಗೀತದಿಂದೊಡಗೂಡಿ  ಅವಳು ಹೋಗುತ್ತಾಳೆ. ಅವನ ಸಂಬಂಧಿಗಳು ಅತಿ ಸಂತೋಷದಿಂದ ಅವಳೊಂದಿಗೆ ಹೋಗುತ್ತಾರೆ. ಒಬ್ಬ ಮನುಷ್ಯನು ಚಿಕ್ಕ ನಗಾರಿ ಭಾರಿಸುತ್ತಾ ನಡೆಯುತ್ತಾನೆ ಮತ್ತು ಅವಳು ತನ್ನ ಗಂಡನನ್ನು ಸೇರಲು ಹೊರಟಿರುವಳೆಂದು ಸಾರುವ ಹಾಡನ್ನು ಹಾಡುತ್ತಾನೆ. ಅವಳೂ ಹಾಗೆ ಮಾಡುವುದಾಗಿ ಹಾಡುತ್ತಲೇ ಹೋಗುತ್ತಾಳೆ. ಅವರನ್ನು ಯಾವಾಗಲೂ ಸುಡುವ ಸ್ಥಳಕ್ಕೆ ಅವಳು ಬರುತ್ತಲೇ ತನ್ನ ಗಂಡನನ್ನು ಸುಡುವವರೆಗೆ ಸಂಗೀತಗಾರರೊಂದಿಗೆ ಅವಳು ಕಾಯುತ್ತಾಳೆ. ಅವನ ದೇಹವನ್ನು ಅದಕ್ಕಾಗಿಯೇ ಮಾಡಿದ ಬಹಳ ಕಟ್ಟಿಗೆಯಿಂದ ಮುಚ್ಚಲಾದ ದೊಡ್ಡ ಕುಣಿಯಲ್ಲಿ ಇಡುತ್ತಾರೆ. ಉರಿ ಹಚ್ಚುವ ಮುನ್ನ ಅವನ ತಾಯಿ ಅಥವಾ ತೀರ ಹತ್ತಿರದ ಸಂಬಂಧಿ ತಲೆಯ ಮೇಲೆ ನೀರಿನ ಕುಡಿಕೆಯನ್ನು ಹೊತ್ತು ಕೈಯಲ್ಲಿ ಕೊಳ್ಳಿ ಹಿಡಿದು ಕುಣಿಯ ಸುತ್ತ ಮೂರು ಸಲ ಹೋಗುತ್ತಾಳೆ ಮತ್ತು  ಸುತ್ತಿಗೆಯೊಂದರಂತೆ ಪಾತ್ರೆಯಲ್ಲಿ ತೂತು ಮಾಡುತ್ತಾಳೆ. ಈ ಮೂರು ಸುತ್ತು ಮುಗಿದ ಮೇಲೆ ಸಣ್ಣದಿದ್ದ ಕುಡಿಕೆಯನ್ನು ಹೊಡೆಯುತ್ತಾಳೆ ಮತ್ತು ಕೊಳ್ಳಿಯನ್ನು ಕುಣಿಯಲ್ಲಿ ಎಸೆಯುತ್ತಾಳೆ. ಆ ಮೇಲೆ ಅವರು ಉರಿ ಹಚ್ಚುತ್ತಾರೆ ಮತ್ತು ದೇಹ ಸುಟ್ಟಾಗ ಉತ್ಸವಕ್ಕೆ ಬಂದ ಎಲ್ಲರೊಂದಿಗೆ ಹೆಂಡತಿ ಅವಳ ಮೇಲೆ ಕೆಲವು ಕರ್ಮಗಳನ್ನು ಮಾಡುತ್ತಾನೆ. ಅವನು ಇದನ್ನು ಮಾಡಿ ಮುಗಿಸಿದ ಮೇಲೆ ಅವಳು ತಾನು ತೊಟ್ಟಿದ್ದ ಎಲ್ಲಾ ಆಭರಣಗಳನ್ನು ತನ್ನ ಕೈಯಿಂದಲೇ ತೆಗೆಯುತ್ತಾಳೆ ಮತ್ತು ತನ್ನ ಸ್ತ್ರೀ ಸಂಬಂಧಿಗಳಿಗೆ ಹಂಚುತ್ತಾಳೆ. ಅವಳಿಗೆ ಮಕ್ಕಳಿದ್ದರೆ ಅವರನ್ನು ತನ್ನ ಅತ್ಯಂತ ಗೌರವಾನ್ವಿತ ಸಂಬಂಧಿಗಳಿಗೆ ಒಪ್ಪಿಸುತ್ತಾಳೆ. ಅವಳು ತೊಟ್ಟಿದ್ದ ಎಲ್ಲವನ್ನೂ ಅವಳ ಒಳ್ಳೆಯ ಬಟ್ಟೆಗಳನ್ನೂ ಸಹ ಅವರು ಕಳಚಿದ ಮೇಲೆ ಅವರು ಅವಳಿಗೆ ಒಂದಿಷ್ಟು ಸಾದಾ ಹಳದಿ ಬಟ್ಟೆಯನ್ನು ತೊಡಿಸುತ್ತಾರೆ ಮತ್ತು ಅವಳ ಸಂಬಂಧಿಗಳು ಅವಳ ಕೈ ಹಿಡಿದುಕೊಳ್ಳುತ್ತಾರೆ. ಅವಳು ಇನ್ನೊಂದರಲ್ಲಿ ಒಂದು ಟೊಂಗೆ ಹಿಡಿದುಕೊಂಡು ಉರಿಯಿದ್ದ ಕುಣಿಯಿದ್ದಲ್ಲಿಗೆ ಹಾಡುತ್ತಾ, ಓಡತ್ತು ಹೋಗುತ್ತಾಳೆ ಮತ್ತು ಕುಣಿಯ ಬಳಿ ಕೆಲವು ಎತ್ತರವಾಗಿ ಮಾಡಲಾದ ಪಾವಟಿಗೆಗಳನ್ನು ಏರುತ್ತಾಳೆ. ಇದನ್ನು ಮಾಡುವ ಮುಂಚೆ ಅವರು ಬೆಂಕಿಯ ಸುತ್ತ ಮೂರು ಸಲ ಸುತ್ತುತ್ತಾರೆ ಮತ್ತು ಆಗ ಅವಳು ಪಾವಟಿಗೆ ಹತ್ತುತ್ತಾಳೆ ಮತ್ತು ಬೆಂಕಿ ಕಾಣದಂತೆ ತನ್ನ ಮುಂದೆ ಒಂದು ಚಾಪೆಯನ್ನು ಹಿಡಿಯುತ್ತಾಳೆ. ಅವರು ಅಕ್ಕಿ ಕಟ್ಟಿದ ಅರಿವೆಯನ್ನು ಮತ್ತು

ವೀಳ್ಯದೆಲೆ ಇರುವ ಇನ್ನೊಂದನ್ನು ಮತ್ತು ಅವಳು ತನ್ನನ್ನು ಸಿಂಗರಿಸಿಕೊಂಡು ಹಣೆಗೆ ಕನ್ನಡಿಗಳನ್ನು ತನ್ನ ಗಂಡನ ಬದಿಯಲ್ಲಿ ಸಿಂಗರಿಸಿಕೊಳ್ಳಲು ಇವೆಲ್ಲ ಬೇಕೆನ್ನುತ್ತ ಬೆಂಕಿಯಲ್ಲಿ ಎಸೆಯುತ್ತಾರೆ. ಅಂತಿಮವಾಗಿ ಅವಳು ಎಲ್ಲರಿಂದ ಬೀಳ್ಕೊಳ್ಳುತ್ತಾಳೆ ಮತ್ತು ತನ್ನ ತಲೆಯ ಮೇಲೆ ಎಣ್ಣೆಯ ಪಾತ್ರೆ ಇಟ್ಟುಕೊಳ್ಳುತ್ತಾಳೆ ಮತ್ತು ಬೆಂಕಿಯಲ್ಲಿ ಎಷ್ಟೊಂದು ಧೈರ್ಯದಿಂದ ಬೀಳುತ್ತಾಳೆಂದರೆ ಅದೊಂದು ಅದ್ಭುತ ಸಂಗತಿಯಾಗಿದೆ.

ಅವಳು ಒಳಗೆ ಬಿದ್ದ ತಕ್ಷಣ ಸಂಬಂಧಿಗಳು ಉರುವಲು ಕಟ್ಟಿಗೆ ಹಿಡಿದು ಸಿದ್ದರಾಗುತ್ತಾರೆ ಮತ್ತು ಶೀಘ್ರವಾಗಿ ಅವರಿಂದ ಅವಳನ್ನು ಮುಚ್ಚುತ್ತಾರೆ. ಹೀಗೆ ಮಾಡಿದ ಮೇಲೆ ಅವರೆಲ್ಲ ಗಟ್ಟಿಯಾಗಿ ರೋದನೆಗೈಯುತ್ತಾರೆ. ಒಬ್ಬ ದಳವಾಯಿ ಸತ್ತಾಗ ಅವನಿಗೆ ಎಷ್ಟೇ ಹೆಂಡತಿಯರಿರಲಿ ಅವರೆಲ್ಲ ಸುಟ್ಟುಕೊಳ್ಳುತ್ತಾರೆ ಮತ್ತು ರಾಜ ಸತ್ತಾಗಲೂ ಅಷ್ಟೇ. ತೆಲುಗರೆಂದು ಕರೆಯಲ್ಪಡುವ ಜಾತಿಯ ಜನರನ್ನು ಬಿಟ್ಟು ವಿಧರ್ಮಿ ನಾಡಿನಲ್ಲೆಲ್ಲ ಇದೇ ಪದ್ಧತಿಯಿದೆ. ತೆಲುಗರಲ್ಲಿ ಅವರು ಸತ್ತಾಗ ಅವರ ಹೆಂಡರನ್ನು ಅವರೊಂದಿಗೆ ಸಜೀವವಾಗಿ ದಫನ ಮಾಡಲಾಗುತ್ತದೆ. ಇವರು ಕುಣಿಗೆ ಬಹಳ ಸಂತೋಷದಿಂದ ಹೋಗುತ್ತಾರೆ. ಅದರೊಳಗೆ ಒಂದು ಅವನಿಗೆ ಇನ್ನೊಂದು ಅವಳಿಗೆ ಎರಡು ಮಣ್ಣಿನ ಕುಳ್ಳಿಡೆಗಳನ್ನು ಮಾಡುತ್ತಾರೆ ಮತ್ತು ಇಬ್ಬರನ್ನೂ ಅವರವರ ಕುಳ್ಳಿಡೆಯ ಮೇಲಿರಿಸಿ ಅವರು ಮುಚ್ಚುವವರೆಗೆ ಸ್ವಲ್ಪ ಸ್ವಲ್ಪವಾಗಿ ಮುಚ್ಚುತ್ತಾರೆ ಮತ್ತು ಹೀಗೆ ಹೆಂಡತಿ ಗಂಡನೊಂದಿಗೆ ಸಾಯುತ್ತಾಳೆ.[12]

**ಸೀಸರ್ ಫ್ರೆಡೆರಿಕ್**

ಇವನು ಇಟಾಲಿಯ ವೇನಿಸ್ ಪಟ್ಟಣದ ನಿವಾಸಿ. ಈತ ಭಾರತದ ಹಲವಾರು ಸ್ಥಳಗಳಿಗೆ ಭೇಟಿನೀಡಿ ಕ್ರಿ.ಶ. 1567ರಲ್ಲಿ ಬಿಜೇನಗರ (ವಿಜಯನಗರಕ್ಕೆ) ಬಂದ. ಇವನು ಸತಿಪದ್ಧತಿ ಕುರಿತಂತೆ ನಾನಿದ್ದ ಏಳು ತಿಂಗಳ ಕಾಲದಲ್ಲಿ ಜೆಂಟೈಲರು ಮಾಡುತ್ತಿದ್ದ ಅನೇಕ ವಿಚಿತ್ರ ಹಾಗೂ ಅಮಾನುಷ ಕೃತ್ಯಗಳನ್ನು ಕಂಡೆ. ಗಣ್ಯರಾದ ಗಂಡಸರಾಗಲೀ ಹೆಂಗಸರಾಗಲೀ ಸತ್ತರೆ ಇಲ್ಲಿ ಸುಡುತ್ತಾರೆ. ಮದುವೆಯಾದ ಗಂಡಸು ಸತ್ತರೆ ಅವನ ಹೆಂಡತಿ ಚಿತೆಯಲ್ಲಿ ಬಿದ್ದು ಸಾಯುತ್ತಾಳೆ. ಗಂಡ ಸತ್ತ ಮೇಲೆ ಹೆಂಡತಿ ಒಂದು ಅಥವಾ ಮೂರು ತಿಂಗಳ ನಂತರ ಚಿತೆಯಲ್ಲಿ ಬೀಳುವುದಕ್ಕೆ ಸಿದ್ಧಳಾಗುತ್ತಾಳೆ. ನಿರ್ದಿಷ್ಟವಾದ ದಿನ ಬಂದಾಗ ಬಹಳ ಹೊತ್ತಿಗೆ ಮುಂಚೆ ಎದ್ದು ಕುದುರೆಯ ಮೇಲೋ, ಆನೆಯ ಮೇಲೋ ಅಥವಾ ಎಂಟು ಜನ ಹೊತ್ತ ಪಲ್ಲಕ್ಕಿಯ ಮೇಲೋ ಕುಳಿತು ಚಿತೆಯ ಸ್ಥಳಕ್ಕೆ ಹೊರಡುತ್ತಾಳೆ. ಆಕೆ ವಧುವಿನಂತೆ ಅಲಂಕಾರ ಮಾಡಿಕೊಂಡಿರುತ್ತಾಳೆ. ತಲೆ ಕೂದಲನ್ನು ಇಳಿಯ ಬಿಟ್ಟಿರುತ್ತಾಳೆ. ತನ್ನ ಯೋಗ್ಯತೆಗನುಸಾರವಾಗಿ ಒಡವೆ ವಸ್ತ್ರಗಳನ್ನು ಹಾಕಿಕೊಂಡಿರುತ್ತಾಳೆ. ಊರಿನಲ್ಲೆಲ್ಲಾ ಆಕೆಯ ಮೆರವಣಿಗೆಯಾಗುತ್ತದೆ. ವೆನೀಸ್‌ನಲ್ಲಿ ಮದುವೆಗೆ ಹೊರಟ ಹೆಣ್ಣಿನ ಮೆರವಣಿಗೆಯಂತೆ. ಆಕೆಯ ಎಡಗೈಯಲ್ಲಿ ಕನ್ನಡಿ, ಬಲಗೈಯಲ್ಲಿ ಒಂದು ಬಾಣ ಇರುತ್ತದೆ. ಮೆರವಣಿಗೆಯಾಗುವಾಗ ಆಕೆ ಹಾಡುತ್ತಾ ಇರುತ್ತಾಳೆ. ತಾನು ತನ್ನ ನಲ್ಲನೊಡನೆ ಚಿರನಿದ್ರೆ ಮಾಡಲು ಹೋಗುತ್ತಿರುವನೆಂದು. ಆಕೆಯ ನೆಂಟರಿಷ್ಟರು ಮೆರವಣಿಗೆಯಲ್ಲಿ ಭಾಗವಹಿಸುತ್ತಾರೆ.

ಮಧ್ಯಾಹ್ನ ಒಂದು ಅಥವಾ ಎರಡು ಗಂಟೆ ಹೊತ್ತಿಗೆ ಎಲ್ಲರೂ ಊರ ಹೊರಗಿರುವ ನಿಗೊಂದಿನ್ ಎಂಬ ನದಿಯ ದಡ ಸೇರುತ್ತಾರೆ. ಅದು ವಿಧವೆಯರನ್ನು ಸುಡುವ ಸ್ಥಳ. ಅಲ್ಲಿ ಚಿತೆಗೆ ಬೇಕಾದ ಕಟ್ಟಿಗೆ ಮುಂತಾದವುಗಳು ಸಿದ್ಧವಾಗಿರುತ್ತದೆ. ಬಂದವರೆಲ್ಲರಿಗೂ ಊಟದ ವ್ಯವಸ್ಥೆ ಆಗಿರುತ್ತದೆ. ಚಿತೆಗೆ ಬೀಳುವ ವಿಧವೆಯು ಸಂತೋಷದಿಂದ ಊಟ ಮಾಡುತ್ತಾಳೆ. ಊಟವಾದ ಮೇಲೆ ಎಲ್ಲರೂ ಹಾಡುತ್ತಾ ಕುಣಿಯುತ್ತಾ

ಸ್ವಲ್ಪ ಹೊತ್ತು ಕಾಲಕಳೆಯುತ್ತಾರೆ. ಆಮೇಲೆ ಚಿತೆಯನ್ನು ಸಿದ್ಧ ಮಾಡುತ್ತಾರೆ. ವಿಧವೆ ತನ್ನ ಗಂಡನ ಹತ್ತಿರದ ಸಂಬಂಧಿಯೊಬ್ಬನ ಕೈ ಹಿಡಿದು ನದಿಯ ಬಳಿಗೆ ಹೋಗುತ್ತಾಳೆ. ಅಲ್ಲಿ ತನ್ನ ಒಡವೆ ವಸ್ತ್ರಗಳನ್ನೆಲ್ಲಾ ಕಳಚಿ, ತನ್ನ ತಂದೆ–ತಾಯಿಗಳಿಗೂ, ನೆಂಟರಿಷ್ಟರಿಗೂ ಕೊಟ್ಟು, ಒಂದು ಬಟ್ಟೆಯನ್ನು ಸುತ್ತಿಕೊಂಡು ನದಿಯಲ್ಲಿ ಸ್ನಾನಮಾಡಿ, 14 ಮೊಳ ಉದ್ದದ ಅರಿಶಿಣದ ಬಟ್ಟೆಯನ್ನು ಉಟ್ಟುಕೊಳ್ಳುತ್ತಾಳೆ. ಪುನಃ ಗಂಡನ ಕಡೆಯವನ ಕೈಹಿಡಿದುಕೊಂಡು ಚಿತೆಯ ಬಳಿಗೆ ಬರುತ್ತಾಳೆ. ಚಿತೆಯ ಬಳಿ ಇರುವ ವೇದಿಕೆಯ ಮೇಲೆ ನಿಂತು ಮಕ್ಕಳಿಗೂ ನೆಂಟರಿಷ್ಟರಿಗೂ ಬುದ್ಧಿ ಮಾತು ಹೇಳುತ್ತಾಳೆ. ಕೆಲವು ವೇಳೆ ಚಿತೆಯ ಸುತ್ತ ತಟ್ಟಿ ಕಟ್ಟಿರುತ್ತಾರೆ. ಬೆಂಕಿಯ ಜ್ವಾಲೆ ಕಾಣಿಸದಿರಲೆಂದು. ಕೆಲವು ಹೆಂಗಸರು ಈ ತಟ್ಟಿಯನ್ನು ಕಿತ್ತು ಹಾಕುತ್ತಾರೆ, ತಾವು ಬೆಂಕಿಗೆ ಹೆದರುವುದಿಲ್ಲ ಎಂಬುದನ್ನು ತೋರಿಸಲು. ಆ ದಡ್ಡಳಾದ ವಿಧವೆ ತನ್ನ ಮಕ್ಕಳು ಮರಿಗಳಿಗೂ ನೆಂಟರಿಷ್ಟರಿಗೂ ಹೇಳಬೇಕಾದ್ದನ್ನೆಲ್ಲಾ ಹೇಳಿದ ಮೇಲೆ, ಬೇರೊಬ್ಬ ಹೆಂಗಸು ಆಕೆಯ ತಲೆಯ ಮೇಲೆ ಒಂದು ಗಡಿಗೆ ಎಣ್ಣೆಯನ್ನು ಸುರಿಯುತ್ತಾಳೆ. ಬರಿದಾದ ಗಡಿಗೆಯನ್ನು ಬೆಂಕಿಗೆ ಬೀಸಾಡುತ್ತಾಳೆ. ಹಾಗೆ ಬಿಸಾಡಿದ ಕೂಡಲೇ ವಿಧವೆ ಚಿತೆಗೆ ಹಾರಿಬಿಡುತ್ತಾಳೆ. ನೆರೆದವರು ಅತ್ತು ಕರೆದು ಗೊಳೋ ಅನ್ನುತ್ತಾರೆ. ಈ ರೀತಿಯಾಗಿ ಅನೇಕ ಜನ ಚಿತೆಯಲ್ಲಿ ಬೀಳುವುದನ್ನು ನಾನು ನೋಡಿದ್ದೇನೆ. ಏಕೆಂದರೆ ನನ್ನ ಬಿಡಾರ ನದಿಗೆ ಹೋಗುವ ಹೆಬ್ಬಾಗಿಲಿನ ಬಳಿಯೇ ಇತ್ತು ಎಂದು ಸೀಸರ್ ಫೆಡ್ರಿಕ್ ಹೇಳುತ್ತಾನೆ.

ದೊಡ್ಡ ಮನುಷ್ಯನೊಬ್ಬ ಸತ್ತಾಗ ಹೆಂಡತಿಯೂ, ಅವನು ಇಟ್ಟುಕೊಂಡಿದ್ದ ದಾಸಿಯರೂ ಒಟ್ಟಿಗೆ ಅವನ ಚಿತೆಯಲ್ಲಿ ಬಿದ್ದು ಸಾಯುತ್ತಾರೆ.

ಇನ್ನೊಂದು ರೀತಿಯಲ್ಲಿ ಹೆಂಗಸರು ತಮ್ಮ ಪ್ರಾಣತ್ಯಾಗ ಮಾಡುವುದನ್ನು ನಾನು ನೋಡಿದ್ದೇನೆ. ಸತ್ತ ಗಂಡನ ಶವವನ್ನು ಚಕ್ಕಲುಬೊಕ್ಕಲಾಗಿ ಕುಳ್ಳಿರಿಸುತ್ತಾರೆ. ಅವನ ಹೆಂಡತಿ ಬಂದು ಅವನ ಕುತ್ತಿಗೆಯನ್ನು ತಬ್ಬಿಕೊಂಡು ಕುಳಿತುಕೊಳ್ಳುತ್ತಾರೆ. ಗಾರೆಯವರು ಸುತ್ತಲೂ ಗೋಡೆ ಕಟ್ಟುತ್ತಾರೆ. ಇನ್ನೇನು ಗೋಡೆಯನ್ನು ಮುಚ್ಚಬೇಕು, ಅಷ್ಟರಲ್ಲಿ ಗಂಡಸೊಬ್ಬನು ಬಂದು ಆಕೆಯ ಕುತ್ತಿಗೆಯನ್ನು ಹಿಸುಕಿ ಸಾಯಿಸಿಬಿಡುತ್ತಾನೆ. ಆಮೇಲೆ ಗೋಡೆಯನ್ನು ಮುಚ್ಚಿ ಇಬ್ಬರನ್ನು ಸಮಾಧಿ ಮಾಡುತ್ತಾರೆ.

ಇಷ್ಟಲ್ಲದೆ, ಇವರಲ್ಲಿ ಇನ್ನೂ ಅನೇಕ ಅನಾಗರೀಕ ಕೃತ್ಯಗಳಿವೆ. ಅವನ್ನೆಲ್ಲಾ ಇಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಈ ರೀತಿ ಏತಕ್ಕೆ ಮಾಡುವಿರೆಂದು ನಾನು ಜನರನ್ನು ವಿಚಾರಿಸಿದಾಗ, ಇದು ತಮ್ಮ ಪುರಾತನ ಪದ್ಧತಿಯೆಂದು ಅವರು ಹೇಳಿದರು. ಹಿಂದಿನ ಕಾಲದಲ್ಲಿ ಹೆಂಡತಿಗೆ ಗಂಡ ಆಗದೆ ಇದ್ದರೆ ವಿಷ ಕೊಟ್ಟು ಸಾಯಿಸಿ ಪರ ಪುರುಷನ ಸಂಗ ಮಾಡುತ್ತಿದ್ದರಂತೆ. ಇದನ್ನು ತಪ್ಪಿಸಲು ಈ ಪದ್ಧತಿಯನ್ನು ಅನುಷ್ಠಾನಕ್ಕೆ ತಂದರಂತೆ. ಹೀಗೆ ಮಾಡಿದಾಗಿನಿಂದ ಹೆಂಡತಿಯರು ಗಂಡಂದಿರ ಬಗ್ಗೆ ಸರಿಯಾಗಿ ನಡೆದುಕೊಳ್ಳುತ್ತಿರುವರೆಂದು ಹೇಳಿದರು. ಏಕೆಂದರೆ ಗಂಡ ಸತ್ತರೆ ಹೆಂಡತಿಗೂ ಅದೇ ಗತಿಯಾಗುತ್ತದೆ.[13]

**ಬ್ಯಾರಡಸ್**

ಇವನು ವಿಜಯನಗರದ ಅವನತಿಯ ನಂತರ ಕೊನೆಯ ಸಂತತಿಯ ಕಾಲದಲ್ಲಿ ಕ್ರಿ.ಶ.1614ರಲ್ಲಿ ಚಂದ್ರಗಿರಿಗೆ ಭೇಟಿ ನೀಡುತ್ತಾನೆ. ಆ ಸಂದರ್ಭದಲ್ಲಿ ಮೊದಲನೆ ರಾಜ ವೆಂಕಟ ಆಳ್ವಿಕೆ ಮಾಡುತ್ತಿರುತ್ತಾನೆ. (ತಿರುಮಲನ ಮಗನಿರಬೇಕು). ಇವನು ಚಂದ್ರಗಿರಿಯಲ್ಲಿ ನಡೆದ ಘಟನೆಗಳನ್ನು ತನ್ನ ವರದಿಯಲ್ಲಿ ದಾಖಲಿಸಿದ್ದಾನೆ. ಅಲ್ಲಿಯ ಸತಿ ಪದ್ಧತಿ ಕುರಿತಂತೆ ಈ ರೀತಿಯಾಗಿ ಹೇಳಿದ್ದಾನೆ.

ಮೂರು ದಿನ ತರುವಾಯ ರಾಜ (ಮೊದಲನೆ ವೆಂಕಟಪತಿ ರಾಯಲು) 67ನೇ ವಯಸ್ಸಿನಲ್ಲಿ ಸತ್ತ. ಅವನ ದೇಹವನ್ನು ಅವನ ತೋಟದಲ್ಲಿ ಸುವಾಸನೆಯ ಕಟ್ಟಿಗೆ, ಗಂಧ, ಕತ್ತಾಳೆ ಮುಂತಾದವುಗಳಿಂದ ಸುಡಲಾಯಿತು, ಕೂಡಲೇ ಮೂವರು ರಾಣಿಯರು ಅಗ್ನಿಗೆ ಅರ್ಪಣೆ ಮಾಡಿಕೊಂಡರು. ಅವರಲ್ಲೊಬ್ಬಳು ರಾಜನಷ್ಟೇ ವಯಸ್ಸಿನವಳು, ಇನ್ನಿಬ್ಬರು 35 ವಯಸ್ಸಿನವರು ಆಗಿದ್ದರು. ಅವರು ಬಹಳ ಧೈರ್ಯ ತೋರಿದರು. ಅವರು ಬೆಲೆಯುಳ್ಳ ಉಡುಪು, ಅನೇಕ ರತ್ನಗಳು, ಬಂಗಾರದ ಆಭರಣಗಳನ್ನು ಮತ್ತು ಅಮೂಲ್ಯ ಹರಳುಗಳನ್ನು ಧರಿಸಿ ನಡೆಸಿದರು. ಚಿತೆಗೆ ಬಂದು ಅವರು ಅವುಗಳನ್ನು ಹಂಚಿದರು. ಕೆಲವನ್ನು ತಮ್ಮ ಸಂಬಂಧಿಗಳಿಗೆ ಕೊಟ್ಟರು. ತಮ್ಮ ಸಲುವಾಗಿ ಪ್ರಾರ್ಥಿಸಲೋಸುಗ ಕೆಲವನ್ನು ಬ್ರಾಹ್ಮಣರಿಗೆ, ಜನರು ಕಚ್ಚಾಡಿ ತೆಗೆದುಕೊಳ್ಳಲು ಕೆಲವನ್ನು (ಪ್ರಾರ್ಥಿಸಿದ) ಅವರೆಡೆ ಎಸೆದರು. ಆ ಮೇಲೆ ಅವರು ಎಲ್ಲಾರಿಗೂ ವಿದಾಯ ಹೇಳಿ ಎತ್ತರದ ಸ್ಥಾನವನ್ನೇರಿ ಬಹಳ ದೊಡ್ಡದಾಗಿದ್ದ ಬೆಂಕಿಯ ಮಧ್ಯದಲ್ಲಿ ಬಿದ್ದರು. ಹೀಗೆ ಅವರು ಅಮರರಾದರು.[14]

ಈ ರೀತಿಯಾಗಿ ವಿದೇಶಿ ಪ್ರವಾಸಿಗರು ತಮ್ಮ ವರದಿಗಳಲ್ಲಿ ವಿಜಯನಗರ ಕಾಲದಲ್ಲಿದ್ದ ಸತಿ ಪದ್ಧತಿ ಕುರಿತಂತೆ ಸ್ಪಷ್ಟವಾಗಿ ದಾಖಲಿಸಿದ್ದಾರೆ. ಅತ್ಯಂತ ವೈಭವಯುತವಾದ ಹಾಗೂ ಶ್ರೀಮಂತಿಕೆಯಿಂದ ಕೂಡಿದ್ದ ರಾಜ್ಯದಲ್ಲಿ ಇಂತಹ ಸಾಕಷ್ಟು ಅನಿಷ್ಟ ಪದ್ದತಿಗಳು ಜಾರಿಯಲ್ಲಿದ್ದವು. ಆ ಕಾಲದಲ್ಲಿ ಸ್ತ್ರೀಯರಿಗೆ ಉನ್ನತ ಸ್ಥಾನಮಾನಗಳಿದ್ದರೂ ಸಹ ಅನೇಕ ಕಟ್ಟುಪಾಡುಗಳಿಗೆ ಹಾಗೂ ಅನಿಷ್ಟ ಪದ್ದತಿಗಳಿಗೆ ಬಲಿಯಾಗುತ್ತಿದ್ದರು.

**ಅಡಿ ಟಿಪ್ಪಣಿಗಳು**

1. ಚೆನ್ನಕ್ಕ ಎಲಿಗಾರ. *ಮಾಸ್ತಿ ಕಲ್ಲು.* ಪು.15
2. *ಅದೇ.* ಪು.16
3. ಕಲಬುರ್ಗಿ. *ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು.* ಪು.27
4. ಚಿದಾನಂದ ಮೂರ್ತಿ ಎಂ. *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಪು.348
5. *ಅದೇ.*
6. *ಅದೇ.* ಪು.349
7. ಶೇಠಿ ಬಿ. ಎಸ್. *ಕರ್ನಾಟಕದಲ್ಲಿ ಸತಿಪದ್ಧತಿ.*
8. ಅದೇ.
9. ವಿವೇಕ ರೈ. *ಪ್ರವಾಸಿ ಕಂಡ ವಿಜಯನಗರ.* ಪು.4
10. *ಅದೇ.* ಪು.42
11. *ಅದೇ.* ಪು.44
12. *ಅದೇ.* ಪು.189
13. *ಅದೇ.* ಪು.198
14. *ಅದೇ.* ಪು.213

**ಪರಾಮರ್ಶನ ಗ್ರಂಥಗಳು**


- ಚೆನ್ನಕ್ಕ ಎಲಿಗಾರ. (1977). *ಮಾಸ್ತಿ ಕಲ್ಲು.* ಕರ್ನಾಟಕ ವಿಶ್ವವಿದ್ಯಾಲಯ.
- ಚಿದಾನಂದಮೂರ್ತಿ, ಎಂ. (2021). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಸಪ್ನ ಬುಕ್‌ಹೌಸ್.
- ಕಲಬುರ್ಗಿ, ಎಂ.ಎಂ. (1980). *ಸಮಾಧಿ–ಬಲಿದಾನ–ವಿರಮರಣ ಸ್ಮಾರಕಗಳು.* ಐಬಿಎಚ್ ಪ್ರಕಾಶನ.
- ಶೇಠಿ, ಬಿ. ಎಸ್. (1991). *ಕರ್ನಾಟಕದಲ್ಲಿ ಸತಿಪದ್ಧತಿ.* ವೀರಶೈವ ಅಧ್ಯಯನ ಅಕಾಡೆಮಿ.
- ವಿವೇಕ ರೈ, ಬಿ.ಎ. (2014). *ಪ್ರವಾಸಿ ಕಂಡ ವಿಜಯನಗರ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.